**ಪಾಠ–8** **ಮೇ 14–20**

# ವಾಗ್ದಾನ



**ಸಬ್ಬತ್ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಇವುಗಳನ್ನು ಓದಿರಿ:** ಆದಿಕಾಂಡ 22, ಇಬ್ರಿಯ 11:17, ಯಾಜಕ 18:21, ಯೋಹಾನ 1:1–3, ರೋಮ 5:6–8, ಆದಿಕಂಡ 23–25, ರೋಮ 4:1–12

**ಸ್ಮರಣ ವಾಕ್ಯ: "ಅಬ್ರಹಾಮನು ಬಹುದಿನದ ವೃದ್ದನಾದನು. ಯೆಹೋವನು ಅವನನ್ನು ಸಕಲವಿಷಯಗಳಲ್ಲಿ ಅಭಿವೃದ್ಧಿಪಡಿಸಿದ್ದನು**". (ಆದಿಕಾಂಡ 24:1)

ಅಂತಿಮವಾಗಿ, ದೇವರು ವಾಗ್ದಾನ ಮಾಡಿದ್ದ ಮೇರೆಗೆ, ಸಾರಳು ಅಬ್ರಹಾಮನಿಗೆ ಅವನ ಮುಪ್ಪಿನ ಕಾಲದಲ್ಲಿ (ಆದಿ 21:2) ಒಬ್ಬ ಮಗನನ್ನು ಹಡೆದಳು, ಮತ್ತು ಆ ಮಗುವಿಗೆ ಇಸಾಕನೆಂದು ಆತನು ಹೆಸರಿಟ್ಟನು (ಆದಿ 21:1–5 ನೋಡಿರಿ). ಆದರೆ ಅಬ್ರಹಾಮನ ಚರಿತ್ರೆಯು, ಮುಕ್ತಾಯದ ಬದಲು, ತನ್ನ ಮಗನಾದ ಇಸಾಕಾನ್ನು ಮೊರಿಯ ಗುಡ್ಡದ ಮೇಲೆ ಯಜ್ಞವಾಗಿ ಕೊಡಲು ಹೋದದ್ದರಲ್ಲಿ ಅಂತಿಮ ಘಟ್ಟವನ್ನು ತಲುಪುತ್ತದೆ. ಇಸಾಕನ ಬದಲಿಗೆ ಒಂದು ಟಗರು ತೋರಿಸಲ್ಪಟ್ಟಿತು (ಆದಿ 22:13). ಇದು ದೇವರು ಆತನ ಸಂತತಿಯ (ಆದಿ 22:17,18) ಮೂಲಕ ಜನಾಂಗಗಳನ್ನು ಆಶೀರ್ವದಿಸುವ ಬದ್ಧತೆಯನ್ನು ಸೂಚಿಸುತ್ತದೆ. ಆ ಸಂತತಿ, ನಿಜವಾಗಿಯೂ, ಯೇಸುವೇ ಆಗಿದ್ದನು (ಅ.ಕೃ 13:23). ಆದ್ದರಿಂದ ಆಶ್ಚರ್ಯವಾದ (ಒಂದು ವಿಧದಲ್ಲಿ ಗೋದಲವಾದ) (ವಿಸ್ತ್ರತ) ಆ ಕಥೆಯಲ್ಲಿ ರಕ್ಷಣೆಯ ವಿಸ್ತ್ರತ ಯೋಜನೆಯು ತಿಳಿಸಲ್ಪಟ್ಟಿದೆ.

---

***ಈ ವಾರದ ಪಾಠಗಳನ್ನು ಮೇ 21ರ ಸಬ್ಬತ್ ಕಲಿಕೆಗಾಗಿ ಓದಿ ಸಿದ್ಧರಾಗಿ.**

ಇದರಲ್ಲಿ ಅನೇಕ ಆತ್ಮೀಕ ಪಾಠಗಳು ಇದಾಗ್ಯೂ, ಅಬ್ರಹಾಮನ ಕುಟುಂಬವು, ಹೇಗಿದ್ದರೂ ತತ್ತರಿಸಿರಲೂ ಸಾಕು ಮತ್ತು ಅಬ್ರಹಾಮನ ಭವಿಷ್ಯವು ಸ್ಪಷ್ಟ್ವಾಗಿಲ್ಲ, ಮೊರಿಯದಲ್ಲಿ ಯಜ್ಞಾರ್ಪಣೆಯ ನಂತರ ಸಾರಳು ಮೃತ್ಯು ಹೊಂದಿದಳು (ಆದಿ 23), ಮತು ಇಸಾಕನು ಒಂಟಿಯಾಗಿ ಉಳಿಯುತ್ತಾನೆ.

ನಂತರ ಅಬ್ರಹಾಮನು ಅವನಿಗೆ 'ಸರಿ' ಭವಿಷ್ಯವು ಒದಗುವಂತೆ ಒಂದು ಕ್ರಮವನ್ನು ಏರ್ಪಡಿಸುತ್ತಾನೆ. ತನ್ನ ಮಗನಿಗೆ ರೆಬೆಕ್ಕಳನ್ನು (ಆದಿ 24) ಮದುವೆಮಾಡಿಸುತ್ತಾನೆ, ಮತ್ತು ಅವಳು ಎರಡು ಮಕ್ಕಳಿಗೆ ಜನ್ಮನೀಡುವಳು (ಆದಿಕಾಂಡ 25:21–23) ಮತ್ತು ಸ್ವತಃ ಕೆತೂರಳನ್ನು ಮದುವೆಯಾಗಿ, ಅವಳು ಇವನಿಗೆ ಅನೇಕಮಂದಿ ಮಕ್ಕಳನ್ನು ಹಡೆದಳು (ಆದಿ 25:1–6). ಈ ವಾರ, ಅಬ್ರಹಾಮನ ಚರಿತ್ರೆಯನ್ನು ಆತನ ಜೀವನದ ಅಂತ್ಯದವರೆಗೆ ತಿಳಿಯುವ.

**ಭಾನುವಾರ** **ಮೇ 15**

## ಮಾರಿಯ ಪರ್ವತವು

ಆದಿಕಾಂಡ 22:1–12 ಮತ್ತು ಇಬ್ರಿಯ 11:17ನ್ನು ಓದಿರಿ. ಈ ಪರೀಕ್ಷೆಯ ಅರ್ಥವೇನಿದ್ದೀತು? ಈ ಆಶ್ಚರ್ಯವಾದ ಘಟನೆಯಿಂದ ಬರುವ ಆತ್ಮೀಕ ಪಾಠಗಳೇನು?

ಜಾಗತೀಕ ಸಾಹಿತ್ಯದಲ್ಲಿ ಆದಿಕಾಂಡ 22 ಒಂದು ಉತ್ಕೃಷ್ಟಕೃತಿಯಾಗಿದ್ದು, ತತ್ವಭೋಧಕರಲ್ಲದೆ ಕಲಕಾರ ಮತ್ತು ತತ್ವಜ್ಞಾನಿಗಳನ್ನು ಪ್ರೇರೇಪಿಸಿದ ಹೇಗಿದ್ದಾಗ್ಯೂ, ದೇವರು ತರುವ ಪರೀಕ್ಷೆಯ ಅರ್ಥವನ್ನು ತಿಳಿಯುವುದು ಕಷ್ಟವೇ. ಈ ದೈವೀಕ ಅಪ್ಪಣೆಯು ಆನಂತರ ಬೈಬಲ್ ನಲ್ಲಿ ನಿಷೇಧಿಸಲಾಗಿರುವ ನರಬಲಿ ಅಪ್ಪಣೆಗೆ ತದ್ವಿರುದ್ಧವಾಗಿದೆ (ಯಾಜಕ 18:21) ಮತ್ತು ದೇವರು ಮಾಡಿದ ನಿತ್ಯವಾದ ಒಡಂಬಡಿಕೆಯ ವಾಗ್ದಾನವು ಇಸಾಕನ ಮೂಲಕ ನೆರವೇರುವುದಕ್ಕೆ ಅಡ್ಡಿಯಾಗುವಂತೆ ಭಾಸವಾಗುತ್ತದೆ (ಆದಿಕಾಂಡ 15:5).

ಹಾಗಿದ್ದಲ್ಲಿ ಆತನು ಇದನ್ನು ಮಾಡಬೇಕೆಂಬುದರಲ್ಲಿ ದೇವರ ಉದ್ದೇಶವೇನು? ಇಂಥಹ ಪ್ರಬಲವಾದ ರೀತಿಯಲ್ಲಿ ಆತನನ್ನು ಪರೀಕ್ಷಿಸುವುದೇಕೆ?

ಬೈಬಲ್ ತತ್ವದ ಪ್ರಕಾರ "ಪರೀಕ್ಷೆ" (ಇಬ್ರಿಯ ಪದಃ ನಿಸ್ಸಾ) ಎಂಬ ಪದವು

ಎರಡು ತದ್ವಿರುದ್ಧ ಅರ್ಥಗಳನ್ನು ಹೊಂದಿದೆ. ಒಂದರ್ಥದಲ್ಲಿ ನ್ಯಾಯತೀರ್ಮಾನದ ಕಲ್ಪನೆಯನ್ನು ತೋರುತ್ತದೆ – ಪರೀಕ್ಷೆಗೊಳಗಾದ ವ್ಯಕ್ತಿಯ ಹೃದಯದಲ್ಲಿ ಏನಿದೆ ಎಂದು ತೀರ್ಮಾನಿಸುವುದು (ಧರ್ಮೋ 8:2; ಇದನ್ನು ಆದಿಕಾಂಡ 22:12 ರೊಂದಿಗೆ ಹೋಲಿಸಿರಿ). ಅಲ್ಲದೇ ಪರೀಕ್ಷೆಗೊಳಗಾದ ವ್ಯಕ್ತಿಗೆ ದೇವರ ಕೃಪೆಯ ಭರವಸೆಯನ್ನು ಸಹ ತರುವಂಥದಾಗಿದೆ (ವಿಮೋ 20:18–20)

ಹಾಗೆಯೇ, ಬೈಬಲ್‌ನ ಪ್ರಕಾರ ವಿಶ್ವಾಸವೆಂದರೆ ನಾವು ದೇವರಿಗೆ ತ್ಯಾಗ ಮಾಡುವುದು ಅಥವಾ ಸಮರ್ಪಣೆ ಮಾಡುವ ನಮ್ಮ ಸಾಮರ್ಥ್ಯವಲ್ಲ ಅದರಲ್ಲಿ ನಮ್ಮ ಪಾತ್ರವಿರಬಹುದು (ರೋಮ 12:1) – ಬದಲಿಗೆ ನಾವು ಎಷ್ಟು ಅನರ್ಹರೆಂದು ಅರ್ಥಮಾಡಿಕೊಂಡು ಆತನನ್ನು ನಂಬುವುದು ಮತ್ತು ಆತನ ಕೃಪೆಯನ್ನು ಸ್ವೀಕರಿಸುವ ನಮ್ಮ ಸ್ವೀಕಾರ ಶಕ್ತಿಯಾಗಿದೆ.

ಮುಂದೆ ಆದದ್ದರಲ್ಲಿ ಈ ಸತ್ಯವು ಪುನಃ ಸ್ಪಷ್ಟವಾಯಿತು. ಅಬ್ರಹಾಮನ ಎಲ್ಲಾ ಕಾರ್ಯಗಳು, ಆತನ ಅತ್ಯಾಸಕ್ತಿಯುಳ್ಳ ಚಟುವಟಿಕೆಗಳು, ತನ್ನ ಮಗನೊಂದಿಗೆ ಬಹಳ ಯಾತನಾಮಯ ನಡಿಗೆ ಮತ್ತು ದೇವರಿಗೆ ವಿಧೇಯನಾಗಿ, ತನ್ನಲ್ಲಿನ ಅತ್ಯುತ್ತಮವಾದದ್ದನ್ನು ಸಮರ್ಪಿಸುವುದಕ್ಕೊ ಸಿದ್ಧನಿದ್ದರೂ, ಅದು ಆತನನ್ನು ಉಳಿಸಲಿಲ್ಲ. ಯಾಕೆ? ಯಾಕೆಂದರೆ ಕರ್ತನು ತಾನೇ ಉದ್ದೇಶಿತ ಯಜ್ಞಕ್ಕಾಗಿ ಒಂದು ಟಗರನ್ನು ಒದಗಿಸಿದನು, ಮತ್ತು ಅದುವೇ ಆತನ ರಕ್ಷಣೆಗೆ ಆಧಾರವಾದ ಏಕೈಕ ಭರವಸೆ – ಯೇಸುವನ್ನೇ ಸೂಚಿಸುತ್ತಿತ್ತು.

ಆನಂತರ, ಅಬ್ರಹಾಮನು ಕೃಪೆಯನ್ನು ಅರ್ಥಮಾಡಿಕೊಂಡಿರಬೇಕು. ನಾವು ದೇವರಿಗಾಗಿ ಮಾಡುವ ನಮ್ಮ ಕಾರ್ಯಗಳು ನಮ್ಮನ್ನು ರಕ್ಷಿಸುವುದಿಲ್ಲ, ಬದಲಿಗೆ, ದೇವರು ನಮಗೋಸ್ಕರ ಕಾರ್ಯಮಾಡುವುದರಲ್ಲಿ ಇದೆ (ಎಫೆಸ್ 3:8; ಇದನ್ನು ರೊಮ 11:33 ರೊಂದಿಗೆ ಹೋಲಿಸಿ) ಆದಾಗ್ಯೂ ಅಬ್ರಹಾಮಮ ಹಾಗೆ, ಅವನ ಕಾರ್ಯಗಳಲ್ಲಿ ಕಂಡುಬರುವಹಾಗೆ, ನಾವು ದೇವರಿಗಾಗಿ ಕಾರ್ಯಮಾಡಬೇಕಾಗಿದೆ (ಯಾಕೋಬ 2:2–23)

ಮೊರಿಯ ಗುಡ್ಡದ ಮೇಲಿನ ಅಬ್ರಹಾಮ ಮತ್ತು ಇಸಾಕರ ಈ ಘಟನೆಯು ವೈಯಕ್ತಿಕವಾಗಿ ನಿಮಗೆ ನಿಮ್ಮ ವಿಶ್ವಾಸ ಮತ್ತು ನೀವು ಅದನ್ನು ವ್ಯಕ್ತಗೊಳಿಸುವುದರ ಬಗ್ಗೆ ಏನು ಹೇಳುತ್ತದೆ?

**ಸೋಮವಾರ** **ಮೇ 16**

## ದೇವರು ಒದಗಿಸುವನು

ಆದಿಕಾಂಡ 22:8, 14,18ನ್ನು ಓದಿರಿ. ತಾನೆ ಒದಗಿಸಿಕೊಡುತ್ತೇನೆಂಬ ವಾಗ್ದಾನವನ್ನು ದೇವರು ಹೇಗೆ ಪೂರೈಸಿದನು? ಮತ್ತು ಏನನ್ನು ಒದಗಿಸಲಾಯಿತು?

ಯಜ್ಞಕ್ಕಾಗಿ ಪ್ರಾಣಿಯ ಕುರಿತು ಇಸಾಕನು ಪ್ರಶ್ನಿಸಿದಾಗ, ಅಬ್ರಹಾಮನು ಮಾರ್ಮಿಕವಾಗಿ ಉತ್ತರಿಸಿದನು: ದೇವರು "ತಾನೇ ತನಗಾಗಿ ಸರ್ವಾಂಗಹೋಮಕ್ಕಾಗಿ ಒಂದು ಕುರಿಯನ್ನು" ಒದಗಿಸುವನು (ಆದಿ 22:8). ಆದರೂ ಇಬ್ರಿಯ ಮೂಲದ ಕ್ರಿಯಾಪದವು ನಿಜವಾಗಿ– "ದೇವರು ತನ್ನನ್ನೇ ಕುರಿಯಾಗಿ ಒದಗಿಸಿಕೊಡುವನು" ಎಂಬ ಅರ್ಥಕೊಡುತ್ತದೆ. ಆ ಕ್ರಿಯಾಪದ "ಒದಗಿಸುವನು" (ಯೀರೆ ಲೋ ಎಂದರೆ 11) ತನ್ನನ್ನೇ ಕೊಡುವುದು" (ಅಥವಾ ನಿಜವಾಗಿ "ತನ್ನನ್ನೇ ನೋಡುವುದು").

ಹಾಗಿದ್ದರೆ, ಇಲ್ಲಿ ತೋರಿಸಲಾಗಿರುವುದೇನೆಂದರೆ, ರಕ್ಷಣೆಯ ಯೋಜನೆಯ ಸತ್ಯಾಂಶ ಕರ್ತನು ತಾನೇ ಸಂಕಟಪಟ್ಟ ನಮ್ಮ ಪಾಪಗಳಿಗಾಗಿ ದಂಡನೆಯನ್ನು ತಾನೇ ತೆತ್ತನು.

ಯೋಹಾನ 1:1–3 ಮತ್ತು ರೋಮ 5:6–8ನ್ನು ಓದಿರಿ. ಈ ವಚನಗಳು ಹೇಗೆ ಮೊರಿಯ ಬೆಟ್ಟದ ಮೇಲೆ ಆದದ್ದು, ಕ್ರೂಜೆಯ ಮೇಲೆ ಆದದ್ದರ ಪೂರ್ವಸೂಚಿ ಎಂದು ಅರ್ಥೈಸಲು ಹೇಗೆ ಸಹಾಯ ಮಾಡುತ್ತವೆ?

ಮೊರಿಯ ಬೆಟ್ಟದ ಮೇಲೆ ಕ್ರೂಜೆಗಿಂತ ಬಹಳಕಾಲ ಹಿಂದೆಯೇ, ಆ ಯಜ್ಞದ ಟಗರು "ಪೊದೆಯಲ್ಲಿ ಕೊಂಬುಗಳಿಂದ ಸಿಕ್ಕಿಕೊಂಡಿ"ದ್ದದ್ದು (ಆದಿ 22:13) ಯೇಸುವನ್ನೇ ಅದು ತೋರಿಸಿಕೊಟ್ಟಿತು. ಅವನೇ ಇಲ್ಲಿ ಆ ಒಬ್ಬನ್ನಾಗಿ ಕಾಣಬರುತ್ತಾನೆಂದು ಮುಂದೆ ಆದಿಕಾಂಡ 22:14ರಲ್ಲಿ ಅಬ್ರಹಾಮನು 'ಬೆಟ್ಟದಲ್ಲಿ ಕರ್ತನು ಕಾಣಿಸುವನು' ಎಂಬುದಾಗಿ ಹೇಳಿರುವಲ್ಲಿ ತಿಳಿಯಬಹುದಾಗಿದೆ. ಅಬ್ರಹಾಮನ ಪ್ರವಾದನಾತ್ಮಕ ಈ ನುಡಿಯನ್ನು ಯೇಸುವು ಉಲ್ಲೇಖಿಸಿ ಹೇಳಿದ್ದೇನೆಂದರೆ: "ನಿಮ್ಮ ಪಿತೃವಾದ ಅಬ್ರಹಾಮನು ನನ್ನ ದಿನವನ್ನು ನೋಡೇನೆಂದು ಉಲ್ಲಾಸಪಟ್ಟನು; ಅದನ್ನು ನೋಡಿ ಸಂತೋಷಗೊಂಡನು" (ಯೋಹಾನ 8:56).

"ಸುವಾರ್ತೆಯ ಸತ್ಯತೆಯನ್ನು ಅಬ್ರಹಾಮನ ಮನಸ್ಸಿನಲ್ಲಿ ಅಚ್ಚೊತ್ತಲು, ಮತ್ತು

ಆತನ ವಿಶ್ವಾಸವನ್ನು ಪರೀಕ್ಷೆ ಮಾಡಲು, ತನ್ನ ಮಗನನ್ನು ವಧಿಸಬೇಕೆಂದು ದೇವರು ಆತನಿಗೆ ವಿಧಿಸಿದನು. ಅಂತಹ ತೀವ್ರ ಶೋಧನ ಕಾಲದ ಅಂಧಕಾರದ ದಿನಗಳಲ್ಲಿ ತಾನು ಅನುಭವಿಸಿದ ಯಾತನೆಯನ್ನು ದೇವರು ಬರಮಾಡಿದ್ದು ಏಕೆಂದರೆ ತನ್ನ ಸ್ವಂತ ಅನುಭವದ ಮೂಲಕ, ಅಪರಿಮಿತನಾದ ದೇವರು ಮಾನವನ ವಿಮೋಚನೆಗಾಗಿ ಮಾಡಿದ ತ್ಯಾಗದ ಮಹತ್ವವನ್ನು ಗ್ರಹಿಸಿಕೊಳ್ಳಬೇಕೆಂಬುದೇ"– ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 159.

ಇಲ್ಲಿ ಆದದ್ದರ ಮೂಲಕ ಕ್ರೂಜೆಯ ಮೇಲೆ ಆದದ್ದು ಏನೆಂಬುದನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಹೇಗೆ ಸಹಾಯ ಮಾಡುತ್ತದೆ ಮತ್ತು ನಮ್ಮ ಬದಲಾಗಿ ದೇವರು ಎಷ್ಟು ಯಾತನೆ ಅನುಭವಿಸಿದನು ಎಂಬುದನ್ನು ತೋರಿಸುತ್ತದೆ? ನಮಗಾಗಿ ಮಾಡಲಾಗಿರುವುದಕ್ಕಾಗಿ ನಮ್ಮ ಪ್ರತಿಕ್ರಿಯೆ ಏನಾಗಿರಬೇಕು?

**ಮಂಗಳವಾರ** **ಮೇ 17**

## ಸಾರಳ ಮರಣವು

ಆದಿಕಾಂಡ 22:22,23ರಲ್ಲಿ ರೆಬೆಕ್ಕಳ ಹುಟ್ಟಿನ ಸುದ್ದಿಯನ್ನು ನೋಡುತ್ತೇವೆ– ಇದು ಮುಂದೆ ಇಸಾಕನ ಮತ್ತು ರೆಬೆಕ್ಕಳ ಮದುವೆಯ ಎದುರು ನೋಡುವುದಕ್ಕೆ ಅನುಕೂಲಿಸುತ್ತದೆ (ಆದಿಕಾಂಡ 24). ಹಾಗೆಯೇ, ಸಾರಳ ಮರಣ ಹಾಗು ಆಕೆಯ ಸಮಾಧಿಕ್ರಿಯೆಯು (ಆದಿಕಾಂಡ 23), ಅಬ್ರಹಾಮನು ಮುಂದೆ ಕೆಟೂರಳನ್ನು ಮದುವೆಯಾಗುವುದರ ಮುನ್ನುಡಿಯಾಗಿದೆ.

ಆದಿಕಾಂಡ 23ರನ್ನು ಓದಿರಿ. ಸಾರಳ ಸಾವು ಮತ್ತು ಸಮಾಧಿಕ್ರಿಯೆಯು, ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದ ನೆರವೇರುವಿಕೆಯಲ್ಲಿ ಈ ಘಟನೆಯು ಯಾವ ಪಾತ್ರ ಹೊಂದಿದೆ?

ಇಸಾಕನ ಬಲಿದಾನದ ಸಂಗತಿಯ ನಂತರ ಉಲ್ಲೇಖವಾಗಿರುವ ಸಾರಳ ಮರಣವು, ಬಹುಶಃ ಆಕೆಯು ಆ ಘಟನೆಯಿಂದ ಘಾಸಿಯಾಗಿರಲೂ ಸಾಕು. ಬಹುಶಃ ಒಂದು ಬಗೆಯಲ್ಲಿ ಸಾರಳು ಸಹ ಆ "ಪರೀಕ್ಷೆ"ಯಲ್ಲಿ ಗಂಡನ ಜೊತೆಯಲ್ಲಿ, ಹಿಂದೆ ಪ್ರಯಾಣಗಳಲ್ಲಿ ಮತ್ತು ನಂಬಿಕೆ ವೈಫಲ್ಯಗಳಲ್ಲಿ ಜೊತೆಯಿದ್ದಂತೆ ಆಗಲೂ ಇದ್ದಿರಬೇಕು (ಆದಿ 12:11–13).

ಸಾರಳಿಗೆ ಘಟನೆಯ ನಂತರ ಆ ವಿಷಯ ತಿಳಿದಿರಬೇಕು ಎಂದು ನಾವು ನೆನೆಪಡಬಹುದು ತನ್ನನ್ನು ಬಾಧಿಸುವ ಮತ್ತು ಪ್ರಮುಖ ವಿಷಯಗಳ ಬಗ್ಗೆ ಮೌನವಹಿಸುವ ಹೆಂಗಸೇನಲ್ಲ (ಆದಿಕಾಂಡ 16:3–5, 18:15, 21:9,10 ಇವುಗಳನ್ನು ಹೋಲಿಸಿರಿ). ಆಕೆಯ ಅನುಪಸ್ಥಿತಿ ಮತ್ತು ಆಕೆಯ ಮೌನ, ಆ ಘಟನೆಯ ನಂತರ ಆಕೆಗೆ ಬಂದ ಸಾವು ಇವೆಲ್ಲವೂ ಸಹ ಆದ ವಿಷಯಗಳಲ್ಲಿ ಆಕೆಯ ಪ್ರಸ್ತುತತೆಯ ಬಗ್ಗೆ ಹೆಚ್ಚು ತಿಳಿಸುತ್ತವೆ. ಸಾರಳ ಇಳಿ ವಯಸ್ಸು (ಆದಿ 23:1) ಮತ್ತು ಅಬ್ರಹಾಮನ ಮುಪ್ಪಿನ ವಯಸ್ಸಿನ ಉಲ್ಲೇಖಗಳು (ಆದಿ 24:1) ಆಕೆಯ ಚರಿತ್ರೆಯ ಮಹತ್ವವನ್ನು ತಿಳಿಸುತ್ತವೆ.

ನಿಜವಾಗಿಯೂ ಹಳೆಯ ಒಡಂಬಡಿಕೆಯ ಹೆಂಗಸರ ಚರಿತ್ರೆಗಳಲ್ಲಿ ಸಾರಳ ವರುಷಗಳ ಲೆಕ್ಕವು ಕೊಡಲಾಗಿದೆ. ಆಕೆಯ ಮರಣಕ್ಕಿಂತಲೂ ಆಕೆಯನ್ನು ಹೂಣಿಟ್ಟ ವಿಷಯದ ಮಹತ್ವವು ಹೆಚ್ಚು ಬರೆಯಲಾಗಿರುವುದನ್ನು ನೋಡಿದರೆ, ವಾಗ್ದತ್ತ ದೇಶಕ್ಕೆ ಹೊಂದಾಣಿಕೆಯಾಗಿರುವ ವಿಷಯವು ಸ್ಪಷ್ಟವಾಗುತ್ತದೆ.

"ಆಕೆಯು ಕಾನಾನ್ ದೇಶದಲ್ಲಿ" ಮೃತಹೊಂದಿದಳು (ಆದಿ 23:2) ಎಂಬ ನಿರ್ದಿಷ್ಟ ಮಾಹಿತಿಯು ದೇವರು ಆ ದೇಶದ ವಿಷಯದಲ್ಲಿ ಮಾಡಿದ ವಾಗ್ದಾನದ ಮಹತ್ವವನ್ನು ಆಧಾರ ಮಾಡಿಕೊಂಡಿರುವುದು ಸಾಬೀತಾಗುತ್ತದೆ. ಅಬ್ರಹಾಮನ ಸಂತತಿಯುವರಲ್ಲಿ ಮರಣಹೊಂದಿ, ವಾಗ್ದಾನದ ದೇಶದಲ್ಲಿ ಸಮಾಧಿ ಮಾಡಲಾದವರಲ್ಲಿ ಸಾರಳು ಪ್ರಥಮಳು. ಅಬ್ರಹಾಮನು ತನ್ನನ್ನು "ಪರದೇಶವನ್ನೂ ಪರವಾಸಿಯೂ" (ಆದಿಕಾಂಡ 23:4) ಎಂದು ಕಳೆದುಕೊಳ್ಳುವುದೂ ಮತ್ತು ಹಿತ್ತೀಯರಲ್ಲಿ ಬಾರಿಬಾರಿ ಹೇಳಿದ ಮಾತುಗಳಿಂದ ಕೇವಲ ಸಮಾಧಿಗಾಗಿ ಒಂದು ಸ್ಥಳವನ್ನು ತೆಗೆದುಕೊಳ್ಳುವುದು ಮಾತ್ರವಲ್ಲ; ಬದಲಿಗೆ ತಾನು ಆ ಸ್ಥಳದಲ್ಲಿ ಖಾಯಂ ಆಗಿ ನೆಲೆಗೊಳ್ಳುವುದರಲ್ಲಿ ಆತನು ಮುಖ್ಯವಾಗಿ ಆಸಕ್ತನಾಗಿದ್ದನು.

ಆದಿಕಾಂಡ 23:6ರನ್ನು ಓದಿರಿ. ಅಬ್ರಹಾಮನು ಹೊಂದಿದ ಜನಮನ್ನಣೆಯ ಬಗ್ಗೆ ಅದು ಏನು ಹೇಳುತ್ತದೆ? ದೇವರು ಆತನನ್ನು ಏನು ಮಾಡಲು ಉಪಯೋಗಿಸಿದ ವಿಷಯವು ನಮಗೆ ತಿಳಿಯುವುದು ಯಾಕೆ ಮಹತ್ವದ್ದಾಗಿದೆ?

**ಬುಧವಾರ** **ಮೇ 18**

## ಇಸಾಕನಿಗೆ ಓರ್ವ ಹೆಂಡತಿ

ಸಾರಳ ಮರಣದ ನಂತರ ಆದಿಕಾಂಡ 24ರಲ್ಲಿ ಇಸಾಕನ ಮದುವೆಯ ಚರಿತ್ರೆಯು ಬರೆದಿದೆ. ಇವೆರಡು ವಿಷಯಗಳು ಹೊಂದಿಕೊಂಡಿವೆ.

ಆದಿಕಾಂಡ 24 ಓದಿರಿ. ತನ್ನ ಮಗನು ಕಾನಾನ್ಯರ ಹೆಣ್ಣುಮಕ್ಕಳನ್ನು ಮದುವೆಯಾಗಬಾರದೆಂಬ ಚಿಂತೆಯು ಅಬ್ರಹಾಮನಿಗೇಕೆ ಇದ್ದಿತು?

ತನ್ನ ಹೆಂಡತಿಯನ್ನು ಸಮಾಧಿಮಾಡಲು ಅಬ್ರಹಾಮನು ಒಂದು ಭೂಮಿಯನ್ನು ಕ್ರಯಕ್ಕೆ ತೆಗೆದುಕೊಳ್ಳಲು ಮನಸ್ಸಿತ್ತು. ಏಕೆಂದರೆ, ಆ ದೇಶವನ್ನು ದೇವರು ಅವನ ಸಂತತಿಗೆ ಕೊಡುವ ವಾಗ್ದಾನ ಮಾಡಿದ್ದನು. ಅಂತೆಯೇ ಇಸಾಕನು ಸಹ ವಾಗ್ದಾತ್ತ ದೇಶದ ಹೊರಗೆ ನೆಲೆಗೊಳ್ಳಬಾರದು (ಆದಿಕಾಂಡ 24:7) ಎಂದು ಈಗ ಬಿಗಿ ನಿಲುವು ಹೊಂದಿದ್ದಾನೆ. ಹಾಗೆಯೇ ಇಸಾಕನು ತನ್ನ ಹೆಂಡತಿಯನ್ನು ಸಾರಳ ಗುಡಾರದೊಳಗೆ ಕರೆದೊಯ್ಯುವುದು ಮತ್ತು ರೆಬೆಕ್ಕಳು ಇಸಾಕನನ್ನು ಅವನ ತಾಯಿಯ ಸಾವಿನ ದುಃಖವನ್ನು ಶಮನಮಾಡಿದಳು ಎಂಬ ವಿಷಯಗಳು ತನ್ನ ತಾಯಿಯ ಸಾವಿನಲ್ಲಿ ತನಗೆ ಆದ ದುಃಖವನ್ನು ತೋರಿಸುತ್ತದೆ.

ಈ ವೃತ್ತಾಂತದಲ್ಲೆಲ್ಲಾ ಪ್ರಾರ್ಥನೆಗಳು ಮತ್ತು ಪ್ರಾರ್ಥನೆಗಳು ನೆರವೇರುವುದು ಮತ್ತು ದೇವರು ಅನುಗ್ರಹ ಮತ್ತು ಮಾನವನ ಸ್ವಾತಂತ್ರ್ಯಗಳ ಮಹಾಶ್ರೀಮಂತ ವಿಚಾರಗಳ ಪಾಠಗಳನ್ನು ಒಳಗೊಂಡಿದೆ. ಅದು ಅಬ್ರಹಾಮನ ಮಾತಿನೊಂದಿಗೆ ಆರಂಭವಾಗುತ್ತದೆ. ಅಬ್ರಹಾಮನು "ಭೂಲೋಕ ಪರಲೋಕಗಳ ದೇವರಾದ ಯೆಹೋವನ" ಹೆಸರಿನಲ್ಲಿ ಪ್ರಮಾಣ ಮಾಡುವ ಮೂಲಕ (ಆದಿ 24:4) ದೇವರೇ ಸೃಷ್ಟಿಕರ್ತನೆಂದು ಮೊದಲಾಗಿ ಒಪ್ಪಿಕೊಂಡು (ಆದಿ 1:1, 14:19) ತನ್ನ ಸಂತತಿಯವರು ಹುಟ್ಟುವುದು ಮತ್ತು ಮೆಸ್ಸೀಯನು ಸ್ವತಃ ಜನಿಸುವುದಕ್ಕೂ ಇದೇ ಆಧಾರವೆಂದು ತಿಳಿದಿದ್ದಾನೆ.

"ತನ್ನ ದೂತನನ್ನು" ಮತ್ತು "ಪರಲೋಕ ದೇವರಾದ ಯಹೋವನು" (ಆದಿ 24:7) ಎಂದು ಹೇಳಿರುವುದು, ಇಸಾಕನು ವಧಿಸಲ್ಪಡುವುದನ್ನು ತಡೆಯಲು ಪರಲೋಕದಿಂದ ಇಳಿದು ಬಂದ ಅದೇ ಕರ್ತನ ದೂತನನ್ನು (ಆದಿ 22:11)

ಕುರಿತು ಗುರುತಿಸುತ್ತಿರುವನು. ವಿಶ್ವವನ್ನೇ ನಿಯಂತ್ರಿಸುವ ದೇವರು, ಇಸಾಕನನ್ನು ರಕ್ಷಿಸಲು ಮಧ್ಯೆ ಬಂದ ಆ ಕರ್ತನ ದೂತನು, ಈಗ ಈ ಮದುವೆಯ ವಿಷಯದಲ್ಲಿ ಮುನ್ನಡೆಸುವನು.

ದೇವರ ಸ್ವರಕ್ಕೆ ಆ ಕನ್ಯೆಯು ಒಪ್ಪದಿರುವ ಸಾಧ್ಯತೆಯನ್ನು ಅಬ್ರಹಾಮನು ಮುಕ್ತವಾಗಿ ಪರಿಗಣಿಸುತ್ತಾನೆ. ದೇವರು ಎಷ್ಟೇ ಬಲಶಾಲಿಯಗಿದ್ದರೂ, ದೇವರು ಮನುಷ್ಯರನ್ನು ಒತ್ತಾಯ ಮಾಡಿ ತನಗೆ ವಿಧೇಯರಾಗಿ ಮಾಡುವುದಿಲ್ಲ. ಎಲಿಯೇಜರನ ಮೂಲಕ ರೆಬೆಕ್ಕಳಿಗೆ ದೇವರ ಯೋಜನೆಯು ತಿಳಿದರೂ ಸಹ, ಆಕೆಯು ತನ್ನ ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಿರುವಳು. ಅಂದರೆ, ಈ ಕನ್ಯೆಯು ಹೋಗಲು ಮನಸ್ಸಿಲ್ಲದಿರಬಹುದು ಮತ್ತು ಆಕೆಯನ್ನು ಒತ್ತಾಯ ಮಾಡಲಾಗದು.

ಅಂತೆಯೇ, ದೇವರು ಮನುಷ್ಯರಾದ ನಮಗೆ ಕೊಟ್ಟಿರುವ ಮುಕ್ತ ಇಚ್ಛೆಯ ಮತ್ತು ಆಯ್ಕೆಯ ಸ್ವಾತಂತ್ರ್ಯವನ್ನು ದಮನಮಾಡುವುದಿಲ್ಲ ಎಂಬ ದೇವರ ಮಹಾಮರ್ಮದ ಒಂದು ಉದಾಹರಣೆಯನ್ನು ಇಲ್ಲಿ ನೋಡುತ್ತೇವೆ (ಒಂದು ವೇಳೆ ಆತನು ಅದನ್ನು ದಮನ ಮಾಡಿದರೇ, ಅದು ಮುಕ್ತ ಸ್ವಾತಂತ್ರ್ಯವಾಗದು). ಆದಾಗ್ಯೂ, ಮಾನವನಿಗೆ ಕೊಡಲಾದ ಈ ಮುಕ್ತ ಆಯ್ಕೆಯ ಸ್ವಾತಂತ್ರ್ಯದ ನಿಮಿತ್ತ ಆಗುವ ಅನೇಕ ಭಯಾನಕ ಆಯ್ಕೆಗಳ ಹೊರತಾಗಿಯೂ ಅಂತಿಮವಾಗಿ, ದೇವರ ಪ್ರೀತಿ ಹಾಗೂ ಒಳ್ಳೆತನವೇ ನಿಲ್ಲುತ್ತವೆ ಎಂಬ ನಾವು ಇನ್ನೂ ಭರವಸವಿಡಬಹುದು.

ಆಗುವ ಎಲ್ಲವೂ ದೇವರ ಚಿತ್ತವಲ್ಲ ಎಂದು ತಿಳಿದರೂ, ದೇವರೂ ಇನ್ನೂ ನಿಯಂತ್ರಣದಲ್ಲಿ ಎಲ್ಲವನ್ನೂ ಇಟ್ಟುಕೊಂಡಿದ್ದಾನೆ ಎಂಬುದು ಏಕೆ ಹೆಚ್ಚು ಸಮಾಧಾನವನ್ನು ಕೊಡುವುದು? ದಾನಿಯೇಲ 2ನೇ ಅಧ್ಯಾಯದ ಪ್ರವಾದನೆಯು, ಈ ವಿಷಯವನ್ನು ನಮಗೆ ಹೇಗೆ ಉದಾಹರಿಸುವುದು?

**ಗುರುವಾರ** **ಮೇ 19**

## ಅಬ್ರಹಾಮನಿಗೆ ಓರ್ವ ಹೆಂಡತಿ

ಆದಿಕಾಂಡ 24:67–25:8ರವರೆಗೆ ಓದಿರಿ. ಅಬ್ರಹಾಮನ ಚರಿತ್ರೆಯ ಅಂತ್ಯದಲ್ಲಿ ನಡೆದ ಈ ಘಟನೆಗಳ ಅರ್ಥವೇನು?

ಸಾರಳ ಮರಣದ ನಂತರ ಅಬ್ರಹಾಮನು ಪುನಃ ಮದುವೆಯಾದನು. ಇಸಾಕನ ಹಾಗೆಯೇ ಸಾರಳ ಸಾವಿನ ನಂತರ ಆತನು ಆದರಣೆ ಹೊಂದಿದನು. ಆತನ ಮಗನಿಗೆ ಹೇಗೋ ಹಾಗೆಯೇ ಸಾರಳ ನೆನವು ಆ ಕುಲನಾಯಕನ ಮನಸ್ಸಿನಲ್ಲಿ ಬಹಳ ಸ್ಪಷ್ಟವಾಗಿದ್ದಿರಬೇಕು.

ಆದರೂ, ಆತನ ಹೊಸ ಹೆಂಡತಿಯ ಗುರುತು ಅಸ್ಪಷ್ಟವಾಗಿದೆ. ಈ ಚರಿತ್ರಕಾರನು ಕೆಟೂರಳ ಮಕ್ಕಳನ್ನು ಹಾಗರಳ ಮಕ್ಕಳೊಂದಿಗೆ ಒಟ್ಟಿಗೆ ಬರೆಯುವ ಮೂಲಕ ಅದು ಕೆಟೂರಳ ಹೆಸರು ಬರೆಯದೇ ಇರುವುದು, ಇವು (ಕೆಲವರು ಹೇಳುವಂತೆ) ಕೆಟೂರಳು ಹಾಗರಳೇ ಆಗಿರಬಹುದು. ಅದು ನಮಗೆ ಗೊತ್ತಿಲ್ಲ ಮತ್ತು ಮತ್ತೊಂದು ಪ್ರಮುಖ ವಿಚಾರವೆಂದರೆ, ಅಬ್ರಹಾಮನು ಕೆಟೂರಳ ಮತ್ತು ಹಾಗರಳ ಮಕ್ಕಳನ್ನು ದೂರ ಕಳುಹಿಸಿಬಿಡುತ್ತಾನೆ. ಯಾವುದೇ ಆತ್ಮೀಕ ಪ್ರಭಾವಗಳು ಆಗದ ಹಾಗೆ ಅವರನ್ನು ಕಳುಹಿಸುತ್ತಾನೆ ಮತ್ತು ಸಾರಳ ಮಗನಿಗೂ ಮತ್ತು ಇತರ ಮಕ್ಕಳಿಗೂ ಆತನು ಸ್ಪಷ್ಟ ಭೇದವನ್ನು ತೋರುತ್ತಿದ್ದಾನೆ.

ಆತನು "ತನಗಿದ್ದ ಆಸ್ತಿ ಎಲ್ಲವನ್ನು ಇಸಾಕನಿಗೆ ಕೊಟ್ಟನು" (ಆದಿ 25:5). ಆದರೆ, ತನ್ನ ಉಪಪತ್ನಿಯರ ಮಕ್ಕಳಿಗೆ ಅನೇಕ ಉಡುಗೊರೆಯನ್ನು ಕೊಟ್ಟನು (ಆದಿ 25:6). ಈ ಉಪಪತ್ನಿಯರ ಸಾಲಿನಲ್ಲಿ ಕೆಟೂರಳು, ಹಾಗರಳ ಹಾಗೆಯೇ ಸೇರಿದ್ದಾಳೆ.

ಆಸಕ್ತಿಕರ ವಿಷಯವೇನೆಂದರೆ, ಆದಿಕಾಂಡ 25:1–4, 12–18ರಲ್ಲಿ ಕೆಟೂರಳ ಮಕ್ಕಳ ಪಟ್ಟಿಯ ಜೊತೆಯಲ್ಲಿ ಇಷ್ಮಾಯೇಲನ ಮಕ್ಕಳ ಪಟ್ಟಿಯು ಕೊಡಲಾಗಿದೆ. ಕೆಟೂರಳೊಂದಿಗೆ ಆದ ಮದುವೆಯ ಸಂತತಿಯಲ್ಲಿ ಹುಟ್ಟಿದ ಆರು ಮಂದಿ ಮಕ್ಕಳು ಮತ್ತು ಇನ್ನಿಬ್ಬರ (ಇಸಾಕನು ಮತ್ತು ಇಷ್ಮಾಯೇಲನು) ಮಕ್ಕಳು ಹೆಸರುಗಳೆಲ್ಲಾ, ಆತನು ಅನೇಕ ಜನಾಂಗಗಳ ಮೂಲಪಿತೃವಾಗಬೇಕೆಂಬ ದೇವರ ವಾಗ್ದಾನದ ನೆರವೇರುತ್ತಿರುವ ತಕ್ಷಣದ ಸಾಕ್ಷಿಯಾಗಿ ಕಾಣಬರುತ್ತದೆ.

ಇಷ್ಮಾಯೇಲನ ವಂಶಾವಳಿಯ ಸಂತತಿಯಲ್ಲಿ ಯಾಕೋಬನಿಗಾದಂತೆ, 12 ಕುಲಗಳು (ಆದಿಕಾಂಡ 17:20) ಬಂದವು. ಆದರೆ, ನಿಜವಾಗಿ ದೇವರ ಒಡಂಬಡಿಕೆಯ ವಾಗ್ದಾನವು ಇಸಾಕನ ಸಂತತಿಗೆ (ಆದಿ 17:21) ಮಾತ್ರ

ಸೀಮಿತವಾಗಿತ್ತು ಮತ್ತು ಇಷ್ಮಾಯೇಲನೊಂದಿಗಲ್ಲ ಎಂಬುದು ಶಾಸ್ತ್ರವು ಬಹಳ ಸ್ಪಷ್ಟವಾಗಿ ಹೇಳುತ್ತದೆ.

ಅಬ್ರಹಾಮನ ಸಾವಿನ ಉಲ್ಲೇಖವು ಎರಡು ವಂಶಾವಳಿಗಳ ನಡುವೆ (ಆದಿ 25:7–11) ಬರೆದಿರುವುದೂ ಸಹ ದೇವರ ಆಶೀರ್ವಾದದ ಅಂಶಕ್ಕೆ ಸಾಕ್ಷಿ ಕೊಡುತ್ತದೆ. ಆತನು ಅಬ್ರಹಾಮನಿಗೆ ಮಾಡಿದ ವಾಗ್ದಾನ ನೆರವೇರಿಸುವುದು– ಅಂದರೆ ಅನೇಕ ವರುಷಗಳ ಹಿಂದೆ– "ಬಹಳ ಮದುಕನಾಗಿ ಸಾಯುವಿ (ಆದಿ 15:15) ಮತ್ತು "ಪೂರ್ಣ ಆಯುಸ್ಸನ್ನು ಮುಟ್ಟುವುದು" ಪ್ರಸಂಗಿ 6:3 ಹೋಲಿಸಿ) ಎಂಬುದನ್ನು ತೋರಿಸುತ್ತವೆ.

ಅಂತ್ಯದಲ್ಲಿ ದೇವರು ತನ್ನ ನಂಬಿಗಸ್ತ ಸೇವಕನಾದ ಅಬ್ರಹಾಮನಿಗೆ ಮಾಡಿದ ಕೃಪೆಯ ವಾಗ್ದಾನಗಳಿಗೆ ನಿಜವಾಗಿ ನಡೆದನು. ಆ ಅಬ್ರಹಾಮನ ನಂಬಿಕೆಯು ಹಳೇ ಒಡಂಬಡಿಕೆಯಲ್ಲಿ ನಂಬಿಕೆಯ ಮೂಲಕ ರಕ್ಷಣೆ (ರೋಮ 4:1–12) ಎಂಬುದಕ್ಕೆ ಒಂದು ದೊಡ್ಡ ಉದಾಹರಣೆಯಾಗಿದೆ (ಬಹುಶಃ ಪರಿಪೂರ್ಣವಾದ ಉದಾಹರಣೆಯಲ್ಲ).

**ಶುಕ್ರವಾರ** **ಮೇ 20**

**ಹೆಚ್ಚಿನ ಚಿಂತನೆಗೆ :** ಅಬ್ರಹಾಮನು ದೇವರೊಂದಿಗೆ ವಿಶಿಷ್ಟ ಸಂಬಂಧ ಹೊಂದಿದ ಪ್ರವಾದಿಯಾಗಿದ್ದರಿಂದ, ದೇವರು ಆತನಿಗೆ ತನ್ನ ಯೋಜನೆಗಳನ್ನು ತಿಳಿಸುತ್ತಿದ್ದನು (ಆದಿ 18:17) ಮತ್ತು ದೇವರು ಅಬ್ರಹಾಮನೊಂದಿಗೆ ಮಾನವ ಚೌಕಟ್ಟಿನಲ್ಲಿ ಒಳಗಾಗಿ, ಕೆಲವು ಮಟ್ಟಿಗೆ ತನ್ನ ಮಗನನ್ನು ಬಲಿಕೊಡುವುದರಿಂದ ರಕ್ಷಣೆ ಮಾಡುವ ತನ್ನ ಉದ್ದೇಶವನ್ನು ತಿಳಿಸಿದನು.

"ಲೋಕದ ಪಾಪಗಳಿಗಾಗಿ ಅರ್ಪಿಸಲ್ಪಟ್ಟ ದೇವರ ಮಗನ ಪ್ರತಿರೂಪವಾಗಿ ಇಸಾಕನು ಇದ್ದನು. ಮಾನವನಿಗೆ ರಕ್ಷಣೆಯ ಸುವಾರ್ತೆಯನ್ನು ದೇವರು ಅಬ್ರಹಾಮನಿಗೆ ಮನದಟ್ಟು ಮಾಡಿದನು. ಇದನ್ನು ಮಾಡಲು ಮತ್ತು ಸತ್ಯವನ್ನು ಆತನಿಗೆ ವಾಸ್ತವಗೊಳಿಸಲು ಹಾಗು ಆತನ ನಂಬಿಕೆಯನ್ನು ಪರೀಕ್ಷಿಸಲು, ತನ್ನ ಪ್ರಿಯ ಇಸಾಕನನ್ನು ಬಲಿಕೊಡಬೇಕಾಗಿ ದೇವರು ಬಯಸಿದನು. ಆ ಕಗ್ಗತ್ತಲ ಹಾಗು ಭಯಾನಕ ಶೋಧನೆಯಲ್ಲಿ ಅಬ್ರಹಾಮನು ಸಹಿಸಿಕೊಂಡ ಎಲ್ಲಾ ದುಃಖ

ಹಾಗೂ ಯಾತನೆಯನ್ನು ಅನುಭವಿಸಿದ್ದರ ಉದ್ದೇಶವೇನೆಂದರೆ, ಬಿದ್ದುಹೋದ ಮನುಷ್ಯನಿಗೆ ವಿಮೋಚನೆಯ ಯೋಜನೆಯನ್ನು ಆತನ ಅರಿವಿಗೆ ಬಹಳ ಆಳವಾಗಿ ಆಚ್ಚೊತ್ತುವುದೇ ಆಗಿತ್ತು. ಸಂಪೂರ್ಣ ನಾಶನದಿಂದ ಮಾನವನನ್ನು ರಕ್ಷಿಸುವುದಕ್ಕೆ ಅಪರಿಮಿತನಾದ ದೇವರು ತನ್ನ ಸ್ವಂತ ಮಗನನ್ನು ಕೊಡುವುದರಲ್ಲಿ ಮಾಡಿದ ವರ್ಣಿಸಲಾಗದ ಆತ್ಮನಿರಾಕರಣೆ ಹೇಗಿತ್ತು ಎಂಬುದರ ಬಗ್ಗೆ ತಿಳುವಳಿಕೆಯನ್ನು ಅಬ್ರಹಾಮನಿಗೆ ತನ್ನ ಸ್ವಂತ ಅನುಭವದ ಮೂಲಕ ಅರ್ಥೈಸಿಕೊಡಲಾಯಿತು. ತನ್ನ ಮಗನನ್ನು ಬಲಿಯಾಗಿ ಅರ್ಪಿಸಬೇಕೆಂಬ ದೈವೀಕ ಅಪ್ಪಣೆಯನ್ನು ವಿಧೇಯಿಸುವುದನ್ನು ಸಹಿಸಿಕೊಂಡದ್ದರಲ್ಲಿ ಅಬ್ರಹಾಮನಿಗಾದ ಮಾನಸಿಕ ಯಾತನೆಯು ಬೇರೆ ಇನ್ಯಾವುದಕ್ಕೂ ಸಮನಾಗಿರಲಿಲ್ಲ"– ಎಲೆನ್ ಜಿ ವೈಟ್, ಟೆಸ್ಟಿಮೊನೀಸ್ ಫಾರ್ ದಿ ಚರ್ಚ್, ಸಂ. 3, ಪುಟ 369.

"ಅಬ್ರಹಾಮನು ಮುಪ್ಪಿನ ಮನುಷ್ಯನಾಗಿದ್ದನು, ಮತ್ತು ಶೀಘ್ರದಲ್ಲಿ ಸಾವು ಬರುವ ನಿರೀಕ್ಷೆಯಿತ್ತು; ಆದರೂ ತನ್ನ ಸಂತತಿಗಾಗಿ ವಾಗ್ದಾನವು ನೆರವೇರುವಿಕೆ ನಿಶ್ಚಯವಾಗಲಿಕ್ಕೆ ಮಾಡಬೇಕಾದ ಒಂದು ಕಾರ್ಯ ಬಾಕಿಯಿತ್ತು. ದೇವರ ಆಜ್ಞೆಗಳನ್ನು ಕಾಯುವವನಾಗಿ ಮತ್ತು ಆರಿಸಲ್ಪಟ್ಟ ಜನಾಂಗದ ತಂದೆಯಾಗಿ ತನ್ನ ಉತ್ತರಾಧಿಕಾರಿಯಾಗಲಿಕ್ಕೆ ಇಸಾಕನು ಮಾತ್ರ ದೈವೀಕನಾಗಿ ನೇಮಕನಾಗಿದ್ದನು. ಆದರೆ ಆತನು ಇನ್ನು ಮದುವೆಯಾಗಿರಲಿಲ್ಲ. ಕಾನಾನಿನ ನಿವಾಸಿಗಳು ವಿಗ್ರಹಾರಾಧನೆಗೆ ಒಪ್ಪಿಸಿಕೊಟ್ಟಿದ್ದರು ಮತ್ತು ತನ್ನ ಜನರು ಅವರೊಂದಿಗೆ ಪರಸ್ಪರ ಮದುವೆಯಾಗುವುದನ್ನು ನಿರ್ಬಂಧಿಸಿದ್ದನು, ಏಕೆಂದರೆ ಅಂತಹ ಮದುವೆಗಳು ಮತಭ್ರಷ್ಟತೆಗೆ ನಡೆಸುತ್ತವೆ ಎಂಬ ತಿಳಿದಿತ್ತು. ಆ ಕುಲನಾಯಕನಿಗೆ ತನ್ನ ಮಗನ ಸುತ್ತಲಿದ್ದ ಮಲಿನಕಾರಿ ಪ್ರಭಾವಗಳ ಪರಿಣಾಮಗಳ ಬಗ್ಗೆ ಕಳವಳಗೊಂಡಿದ್ದನು.... ಅಬ್ರಹಾಮನ ಮನಸ್ಸಿನಲ್ಲಿ ತನ್ನ ಮಗನಿಗೆ ಆಗಬೇಕಾದ ಹೆಂಡತಿಯ ಆಯ್ಕೆಯ ವಿಷಯವು ಬಹಳ ಗಂಭೀರವಾದ ಮಹತ್ವದ್ದಾಗಿತ್ತು; ದೇವರಿಂದ ಅವನನ್ನು ದೂರಮಾಡದಂಥ ಒಬ್ಬಳನ್ನು ಅವರಿಗೆ ಮದುವೆಮಾಡಿಸಬೇಕೆಂದು ಚಿಂತೆಯಲ್ಲಿದ್ದನು... ಇಸಾಕನು ತನ್ನ ತಂದೆಯ ಜ್ಞಾನ ಮತ್ತು ಒಲವಿನ ಮೇಲೆ ಭರವಸವಿಟ್ಟು ಮತ್ತು ದೇವರು ಸಹ ತಾನೆ ಮಾಡಬೇಕಾದ ಆಯ್ಕೆಯಲ್ಲಿ ನಿರ್ದೇಶಿಸುವನು ಎಂದು ನಂಬಿ, ಆ ವಿಷಯವನ್ನು ತನ್ನ ತಂದೆಗೆ ಒಪ್ಪಿಸಿಕೊಟ್ಟು

ಸಮಾಧಾನಪಟ್ಟನು"– ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 171.

## ಚರ್ಚಿಸಬೇಕಾದ ಪ್ರಶ್ನೆಗಳು

1. ತರಗತಿಯಲ್ಲಿ ಅಬ್ರಹಾಮನು ಇಸಾಕನನ್ನು ಯಜ್ಞಾರ್ಪಿಸುವುದಕ್ಕೆ ಮನಸ್ಸಿದಿದ್ದರ ಬಗ್ಗೆ ಚರ್ಚಿಸಿ. ಈ ಘಟನೆಯು ತೋರಿಸುವ ವಿಶ್ವಾಸದ ಬಗ್ಗೆ ಏನೆಂಬುದಾಗಿ ಆಲೋಚಿಸಿ ನೋಡಿರಿ. ಈ ಘಟನೆಯಲ್ಲಿ ಆಶ್ಚರ್ಯಗೊಳಿಸುವ ಮತ್ತು ಗಾಬರಿ ಮಾಡುವ ವಿಷಯಗಳು ಯಾವವು?

2. ಮುಕ್ತ ಇಚ್ಛೆಯ ಬಗ್ಗೆ ಏನು ಹೇಳಬಹುದು? ಇದು ನಿಜವಾಗಿರದಿದ್ದರೆ ನಮ್ಮ ನಂಬಿಕೆಗೆ ಯಾವುದೇ ಅರ್ಥವಿರುವುದಿಲ್ಲ– ಏಕೆ? ಮುಕ್ತ ಇಚ್ಛೆಯ ಆಯ್ಕೆಯ ಬಗ್ಗೆ ಬೈಬಲ್ಲಿನಲ್ಲಿರುವ ಉದಾಹರಣೆಗಳು ಯಾವವು ಮತ್ತು ಜನರು ತಪ್ಪು ಆಯ್ಕೆಗಳನ್ನು ಮಾಡಿದರೂ ಅಂತಿಮವಾಗಿ ದೇವರ ಚಿತ್ತವೇ ನೆರವೇರುತ್ತದೆ ಎಂಬುದಕ್ಕೆ ಉದಾಹರಣೆಗಳು ಏನು?